ಕಥೆ



ನಗರ ಓಡೋಡಿ ಆಯಾಸಗೊಳ್ಳುತ್ತದೆ. ಪ್ರಸ್ತುತ ಸರ್ಕಲ್ ಶೂನ್ಯವಾಗಿದೆ. ಸರ್ಕಲ್‌ನಲ್ಲಿ ತುಂಬಾ ಬೆಳಕಿದೆ. ಆದರೆ ನಗರ ಅಂಧಕಾರದಲ್ಲಿ ಮುಳುಗಿದೆ. ಅಂಧಕಾರದ ನಡುವೆ ಬೆಳಕಿನ ಈ ನೀರಿನ ತೊಟ್ಟಿ ಮಾಯಾವಿಯಂತೆ ತೋರುತ್ತಿದೆ. ಈ ಬೆಳಕಿನಿಂದಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಕೂತಿರುವ ಈ ಅರೆನಗ್ನ ಸಂತ ಮತ್ತೂ ಮಾಯಾವಿಯಂತೆ ತೋರುತ್ತಿದ್ದಾನೆ. ಒಂದು ಮಿತಿಯವರೆಗೆ ಸಂದೇಹಾಸ್ಪದ ವ್ಯಕ್ತಿಯಂತೆಯೂ ತೋರುತ್ತಿದ್ದಾನೆ. ಗಸ್ತು ತಿರುಗುತ್ತಿದ್ದ ಪೊಲೀಸ್ ಜೀಪ್ ಈ ಸಂದೇಹಾಸ್ಪದ ವ್ಯಕ್ತಿಯನ್ನು ನೋಡಿ ನಿಂತಿತು.

ಜೀಪ್‌ನಿಂದ ಕೆಳಗಿಳಿದ ಪೊಲೀಸ್ ಅಲ್ಲಿಯೇ ನಿಂತು ಕೇಳಿದ, "ಯಾರೋ ನೀನು?" ಗಾಂಧೀಜಿಯವರು ಕಣ್ಣುಗಳನ್ನು ತೆರೆದರು. ಪೊಲೀಸನ್ನು ದುರುಗುಟ್ಟಿ ನೋಡಿದರು. ಸ್ವತಂತ್ರ ಭಾರತದ ಪೊಲೀಸರ ಭಾಷೆಯೂ ಬ್ರಿಟಿಷರ ಆಳ್ವಿಕೆಯಲ್ಲಿ ಇದ್ದಂತೆಯೇ ಇದೆ ಎಂಬುದನ್ನು ಕೇಳಿ ಅವರಿಗೆ ದುಃಖವಾಯಿತು.

"ಮುದಿ ವಯಸ್ಸಿನಲ್ಲಿ ಕಿವಿಗಳು ಕೇಳಿಸುತ್ತಿಲ್ವೋ ಅಥವಾ ತಲೆ ಕೆಟ್ಟಿದೆಯೋ?" ಪೊಲೀಸು ಸರ್ಕಲ್ ನ ಸಮೀಪಕ್ಕೆ ಬಂದು ಕೇಳಿದ.

ಗಾಂಧೀಜಿ ಈಗಲೂ ಮೌನವಾಗಿದ್ದರು. ಗಾಂಧಿ ಎಂದರೆ ಭಾರತದ ಪೊಲೀಸರು ನಂಬಲ್ಲ!

ಪೊಲೀಸು ಅಲ್ಲಿಂದಲೇ ಮತ್ತೆ ಜೀಪ್‌ನಲ್ಲಿ ಕೂತಿದ್ದ ಇನ್ಸ್‌ಪೆಕ್ಟರ್‌ಗೆ ಕೇಳಿಸುವಂತೆ ಹೇಳಿ ಮುಂದಿನ ಕ್ರಮಕ್ಕೆ ಮಾರ್ಗದರ್ಶನ ಕೇಳಿದ, "ಸಾರ್, ಈ ನನ್ಮಗ ಏನೂ ಮಾತಾಡ್ತಿಲ್ಲ. ನೀವು ಹೂಂ ಎಂದರೆ ಕಕ್ಕಿಸಿ ಬಿಡ್ತೀನಿ! "

ವಿಷಯ ಮತ್ತೂ ಸಂದೇಹಾಸ್ಪದವಾಗುತ್ತಿತ್ತು . ಈ ನಡು ರಾತ್ರಿಯಲ್ಲಿ ಈ ಮುದುಕ ಅದೇನು ಮಾಡುತ್ತಿದ್ದಾನೆ?

ಇವನಿಗೆ ತಲೆ ಕೆಟ್ಟಿದೆಯೋ ಅಥವಾ ಯಾವುದಾದರೂ ಗಲಭೆಗೆ ಹೊಂಚು ಹಾಕುತ್ತಿದ್ದಾನೋ ? ಪಂಚೆಯಲ್ಲಿ ಬಾಂಬ್ ಇಟ್ಟುಕೊಂಡಿದ್ದರೆ ?

ಇನ್ಸ್‌ಪೆಕ್ಟರ್ ಜೀಪ್‌ನಲ್ಲಿ ಕೂತೇ ಪೊಲೀಸಿಗೆ ದಬಾಯಿಸಿದ. "ಏಯ್, ಮುದುಕನ ಹೆಸರು ಕೇಳೋ ! "

'ನನ್ನ ಹೆಸರು ಮೋಹನದಾಸ್ ಕರಮಚಂದ್ ಗಾಂಧಿ. ಜನ ನನ್ನನ್ನು ಮಹಾತ್ಮಾ ಗಾಂಧಿ ಎಂಬ ಹೆಸರಿನಿಂದ ಕರೆಯುತ್ತಾರೆ. ಮತ್ತೇನಾದರೂ ಬೇಕಾ?"

ಗಾಂಧೀಜಿಯವರು ಪೊಲೀಸ್ ಕೇಳುವುದಕ್ಕೂ ಮೊದಲೇ ಹೇಳಿದರು.

ಪೊಲೀಸು ಅವನ ಮಾತಿಗೆ ಗಮನಕೊಡದೆ ಅಲ್ಲಿಂದಲೆ ಸಾಹೇಬರಿಗೆ ಹೇಳಿದ, "ಸಾರ್, ಇವನು ತಾನು ಮಹಾತ್ಮಾ ಗಾಂಧಿ ಅಂತ ಹೇಳ್ತಿದ್ದಾನೆ."

ಇನ್ಸ್ ಪೆಕ್ಟರ್ ನಕ್ಕ. ಪೊಲೀಸ್ ಸಹ ನಕ್ಕ. ವಿಷಯ ಈಗ ಸಂದೇಹಕ್ಕಿಂತ ಹೆಚ್ಚು ರೋಚಕವಾಗಿತ್ತು. ಇವನ್ಯಾರೋ ಹುಚ್ಚನಿರಬೇಕು. ಗಾಂಧೀಜಿಯವರ ಪ್ರತಿಮೆ ಕೆಳಗೆ ಸ್ವಲ್ಪ ಹೊತ್ತು ಕೂತು ತನ್ನನ್ನು ಮಹಾತ್ಮಾ ಗಾಂಧಿ ಎಂದು ತಿಳಿದುಕೊಳ್ಳಲು ಪ್ರಾರಂಭಿಸಿದ್ದಾನೆ. ವಿಷಯ ತಮಾಷೆಯಾಗಿದೆ.

ಅವನ ಬಳಿಗೇ ಹೋಗಿ ಯಾಕೆ ಮಜಾ ಅನುಭವಿಸಬಾರದು?

ಸರಿ . ಇನ್ಸ್‌ಪೆಕ್ಟರ್ ಸಹ ಜೀಪ್‌ನಿಂದ ಇಳಿದು ಬಂದ.

"ಅಜ್ಜ, ನೀನು ಯಾವ ಮಹಾತ್ಮಾ ಗಾಂಧಿ? 'ಪೋಸ್ಟರ್ ಗಾಂಧಿಯೋ? ಅಂಚೆ ಚೀಟಿಯಲ್ಲಿರೋ ಗಾಂಧಿಯೋ?

ಈ ಪ್ರತಿಮೆಯ ಗಾಂಧಿಯೋ ? ಅಥವಾ ...?" ಇನ್ಸ್‌ಪೆಕ್ಟರ್ ತಮಾಷೆ ಮಾಡಿದ.

'ಮಿತ್ರ, ನಿನಗೆ ಯಾವ ಗಾಂಧಿಯ ಪರಿಚಯವಿದೆ?"ಗಾಂಧೀಜಿಯವರು ಮುಗುಳ್ನಗುತ್ತಾ ಕೇಳಿದರು.

"ನಾವು ನೋಟಿನಲ್ಲಿ ಮುದ್ರಣಗೊಂಡ ಗಾಂಧೀಜಿಯವರನ್ನೇ ಗುರುತಿಸುತ್ತೇವೆ. ಇಂದು ಎಲ್ಲರೂ ಈ ಗಾಂಧೀಜಿಯನ್ನೇ ಗುರುತಿಸುವುದು. ಎಲ್ಲರ ಮನಸ್ಸಿನಲ್ಲಿ ಅವನಿಗೆ ತುಂಬಾ ವ್ಯಾಲ್ಯು ಇದೆ. ಸಾವಿರ ರೂಪಾಯಿಗಳ ನೋಟಿನಲ್ಲಿ ಮುದ್ರಣಗೊಂಡ ಗಾಂಧಿಯ ಕಾಲಿಗೆ ಬೀಳೋಣ ಅಂತ ಅನ್ನಿಸುತ್ತದೆ. ನೋಟಿನಲ್ಲಿ ಅವರ ಫುಲ್ ಸೈಜ್ ಫೋಟೋ ಇರೋದಿಲ್ಲ, ಹೀಗಾಗಿ ಅವರ ಕಾಲು ಮುಟ್ಟಲು ಸಾಧ್ಯವಾಗಿಲ್ಲ."

ಗಾಂಧೀಜಿಯವರು ಮುಗುಳ್ನಗುತ್ತಾ ಇನ್ಸ್‌ಪೆಕ್ಟರ್ ಗೆ ಹೇಳಿದರು, "ಹಾಗಾದ್ರೆ ನಿಮಗೆ ನನ್ನ ಗುರುತು ಹಿಡಿಯಲು ಸಾಧ್ಯವಿಲ್ಲ. ನಾನು ನೋಟುಗಳಲ್ಲಿ ವಾಸ ಮಾಡದ ಗಾಂಧೀಜಿ ."

ಈಗ ಇನ್ಸ್‌ಪೆಕ್ಟರ್ ತಮಾಷೆ ಬಿಟ್ಟು ವಾಸ್ತವ ಜಗತ್ತಿಗೆ ಬಂದ. ಅವನು ಪೊಲೀಸ್-ಶೈಲಿಯಲ್ಲಿ ಗುಡುಗಿದ, "ಗಾಂಧಿ ಕನ್ನಡಕ ಹಾಕ್ಕೊಂಡು, ಸೊಂಟಕ್ಕೆ ಪಂಚೆ ಮತ್ತು ಗಡಿಯಾರವನ್ನು ಜೋತು ಬಿಟ್ಟುಕೊಂಡು ನಿನ್ನನ್ನೇ ಗಾಂಧಿ ಎಂದು ನೀನು ತಿಳಿದುಕೊಳ್ಳಿಲ್ಲ ತಾನೇ ಭಾರತದ ಪೊಲೀಸರಿಗೆ ಮೋಸ ಮಾಡ್ತಿದ್ದೀಯ. ಏಯ್ ! ಬಾಡಿಗೆ ಡ್ರೆಸ್ ಹಾಕ್ಕೊಂಡು ಹೀಗೆ ಮಕ್ಕಳೂ ಸಹ ಶಾಲೆಯಲ್ಲಿ ಗಾಂಧಿ ಆಗ್ತಿರ್ತಾರೆ ... ನೀನು ಯಾರು ಅಂತ ನಮಗೆ ನಿಜ ಹೇಳಿಬಿಡು , ಇಲ್ಲದಿದ್ರೆ ...."

"ನಾನು ನಿಜವನ್ನೇ ಹೇಳ್ತಿದ್ದೇನೆ.. ನಾನು ನಿಜವಾಗಿಯೂ ಮಹಾತ್ಮಾ ಗಾಂಧಿಯೇ ... ನನ್ನನ್ನು ಗುರುತಿಸಲು ಆಗಲಿಲ್ವ ?"

" ನಾವು ಪೆರೇಡ್ ಮಾಡಿಸಿಯೇ ಗುರುತಿಸುತ್ತೇವೆ. ಸ್ಟೇಷನ್ ಗೆ ಕರೆದುಕೊಂಡು ಹೋಗ್ಲಾ? ಪೆರೇಡ್ ಮಾಡಿಸ್ಲಾ?"

" ನಿಮ್ಮಿಚ್ಚೆ. ನಾನು ಜೈಲಿಗೆ ಹೆದರಲ್ಲ ... ಬೇಕಾದಷ್ಟು ಸಲ ಅರೆಸ್ಟ್ ಆಗಿದ್ದೇನೆ."

" ನೀನು ಹಿಸ್ಟರಿ ಶೀಟರ್ ಅಂತ ತಿಳಿದಿದ್ದೀಯ ?....ನಮಗೇ ಹೆದರಿಸುತ್ತೀಯಾ?"

" ಇಲ್ಲ...ಹೇಳ್ತೀದ್ದೀನಿ, ಅಷ್ಟೆ. ಮಗು, ನಾನು ಗಾಂಧಿಯೇ! "

ಇವನು ಇಲ್ಲೇ ಎಲ್ಲೋ ವಾಸ ಮಾಡುತ್ತಿರುವ ತಲೆ ಕೆಟ್ಟ ಮುದುಕ, ರಾತ್ರಿ ಎದ್ದು ಇಲ್ಲಿಗೆ ಬಂದಿದ್ದಾನೆಂದು ಇನ್ಸ್‌ಪೆಕ್ಟರ್ ಯೋಚಿಸುತ್ತಿದ್ದ.

"ಮುದುಕ, ಎಲ್ಲಿ ವಾಸ ಮಾಡ್ತೀಯ?"

"ಇಲ್ಲೇ ಸರ್ಕಲ್‌ನಲ್ಲಿ, ಮೇಲೆ ನೀವೆಲ್ಲಾ ನನ್ನನ್ನು ಪ್ರತಿಮೆಯಲ್ಲಿ ಬಂಧಿಸಿಟ್ಟಿದ್ದೀರಲ್ಲ... ಇನ್ನೆಲ್ಲಿಗೆ ಹೋಗ್ಲಿ? ನಾನಿಲ್ಲೇ ಇರಬೇಕಾಗುತ್ತೆ."

ಮಹಾತ್ಮಾ ಗಾಂಧೀಜಿಯವರು ತಮ್ಮ ವಿಳಾಸದೊಂದಿಗೆ ಕೂಡಿಕೊಂಡಿದ್ದ ವ್ಯಥೆಯನ್ನು ಹೇಳಿದರು.

'ನಿನ್ನ ಹತ್ರ ಇಲ್ಲಿ ವಾಸ ಮಾಡುತ್ತಿರುವುದಕ್ಕೆ ಯಾವುದಾದರೂ ದಾಖಲೆ ಇದೆಯಾ? ಅಂದರೆ ವಿದ್ಯುತ್ ಬಿಲ್ ? ರೇಷನ್ ಕಾರ್ಡ್? ಪಾಸ್ ಪೋರ್ಟ್?... ಏನಾದರೂ ಆದೀತು..."

"ಅವೇನೂ ಇಲ್ಲ. ನಾನೆಂದೂ ಮಾಡಿಸಲೂ ಇಲ್ಲ. ಮಹಾತ್ಮಾ ಗಾಂಧಿಯನ್ನು ಎಲ್ಲರೂ ಗುರುತಿಸುತ್ತಾರೆಂದು ಯೋಚಿಸುತ್ತಿದ್ದೆ ....."

'ನೀನು ಮಹಾತ್ಮಾ ಗಾಂಧಿ ? ನಿಜವಾಗ್ಲೂ?'

'ಹೌದು, ನಾನು ಮಹಾತ್ಮಾ ಗಾಂಧಿಯೇ .'

"ಆದ್ರೆ ಅವರು ಆಗಲೇ ಸತ್ತರಲ್ಲ.. ಸರ್ಕಾರಿ ದಾಖಲೆಯಲ್ಲಿ ಯಥಾಪ್ರಕಾರ ಡೆತ್ ಸರ್ಟಿಫಿಕೇಟ್ ಇದೆಯಪ್ಪಾ!

ಈಗ ಗಾಂಧಿ ಎಲ್ಲೂ ಇಲ್ಲ. ಎಲ್ಲರಿಗೂ ಗೊತ್ತಿದೆ. ನೀನು ಇಲ್ಲಿಂದ ತಕ್ಷಣ ಹೊರಟು ಹೋಗು. ಇಲ್ಲದಿದ್ರೆ ದೊಣ್ಣೆಯಿಂದ ನಿನ್ನ ಹಿಂಭಾಗಕ್ಕೆ ಬಾರಿಸ್ತೀನಿ...."

ಗಾಂಧಿ ತಮ್ಮ ಸಾಹೇಬರೊಂದಿಗೆ ಹೀಗೆ ಮಾತನಾಡುತ್ತಿರುವುದು ಪೊಲೀಸಿಗೆ ಸಹಿಸಲು ಸಾಧ್ಯವಾಗಲಿಲ್ಲ.

ಇನ್ಸ್‌ಪೆಕ್ಟರ್ ಮತ್ತೂ ಸಮಯ ಹಾಳು ಮಾಡಲು ಬಯಸುತ್ತಿರಲಿಲ್ಲ. ಒಬ್ಬ ತಲೆ ಕೆಟ್ಟ ಮುದುಕನೊಂದಿಗೆ ರಾತ್ರಿಯನ್ನು ಹಾಳು ಮಾಡಿಕೊಳ್ಳುವುದು ಉಚಿತವಲ್ಲವೆಂದು ಅವನಿಗೆ ಅನ್ನಿಸಿತು.

'ಬದ್ರಿ, ಇವನನ್ನು ಬಿಟ್ಟುಬಿಡು, ಸಮಯ ಹಾಳು ಮಾಡಬೇಡ. ಮುದುಕನಿಗೆ ವಾರ್ನಿಂಗ್ ಕೊಟ್ಟು ಕಳುಹಿಸು .... ಮತ್ತೆ ಮುದುಕ, ನೀನೂ ಕೇಳು .. ಈಗಿಂದೀಗ್ಲೆ ಇಲ್ಲಿಂದೆದ್ದು ಹೋಗು. ರಾತ್ರಿಯಾಗಿ ತುಂಬಾ ಹೊತ್ತಾಗಿದೆ. ಬಯಲಲ್ಲಿ ಅರೆಬೆತ್ತಲಾಗಿ ಕೂತರೆ ಕಾಯಿಲೆ ಬೀಳ್ತೀಯ. ಮುದುಕ ಎಲ್ಲಿಗೆ ಹೋದ ಅಂತ ನಿನ್ನ ಮನೆಯವರು ಹುಡುಕುತ್ತಿರಬಹುದು. ಮನೆಗೆ ಹೋಗು. ಮುದುಕಿ ಅಳ್ತಿರಬೇಕು... ಮತ್ತೆ ನೋಡು! ... ನಾವು ವಾಪಸ್ ಹೋಗ್ತೀವಿ. ಮತ್ತೆ ನೀನಿಲ್ಲಿ ಕಾಣಿಸಬಾರದು, ತಿಳೀತ?'

ಗಾಂಧೀಜಿಯವರಿಗೆ ವಾರ್ನಿಂಗ್ ಕೊಟ್ಟು ಪೊಲೀಸ್ ನೊಂದಿಗೆ ಇನ್ಸ್‌ಪೆಕ್ಟರ್ ಜೀಪ್ ಹತ್ತಿ ಹೊರಟು ಹೋದ. ಗಾಂಧೀಜಿಯವರು ಸರ್ಕಲ್‌ನಲ್ಲಿ ಮೌನ ತಾಳಿ ಕೂತುಬಿಟ್ಟರು.

ಪ್ರತಿಮೆಯನ್ನು ಹೊರತುಪಡಿಸಿ ಎಲ್ಲಿಗೆ ಹೋಗುವುದು? ದೇಶದಲ್ಲಿ ಗಾಂಧಿಗೆ ಇನ್ನೆಲ್ಲೂ ಜಾಗವನ್ನು ಬಿಟ್ಟಿಲ್ಲ. ಪರಿವಾರದವರು ಗಾಂಧಿಯನ್ನು ಹುಡುಕುತ್ತಲೇ ಇಲ್ಲ, ಹೀಗಿರುವಾಗ ಅವರೆಲ್ಲಿಗೆ ಹೋಗುವುದು?